



ದಿನಾಂಕ:17-11-2025 ರಂದು ಬವೇರಿಯನ್ ರಾಜ್ಯ ಸಂಸತ್ತಿನ ಪ್ರೆಸಿಡಿಯಂ ನಿಯೋಗದೊಂದಿಗೆ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿ ಶ್ರೀ ಬಸವರಾಜ ಎಸ್. ಹೊರಟ್ಟಿ ಹಾಗೂ ವಿಧಾನಸಭೆಯ ಮಾನ್ಯ ಸಭಾಧ್ಯಕ್ಷರಾದ ಶ್ರೀ ಯು.ಟಿ ಖಾದರ್ ಅವರು ಸಂವಾದಾತ್ಮಕ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಮಾನ್ಯ ಸಭಾಪತಿಯವರು ಬವೇರಿಯನ್ ರಾಜ್ಯ ಸಂಸತ್ತಿನ ಪ್ರೆಸಿಡಿಯಂ ನಿಯೋಗದವರಿಗೆ 12 ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸ್ಥಾಪಿತವಾದ ಜಗತ್ತಿನ ಮೊದಲ ಸಂಸತ್ತಿನ ಮಾದರಿಯಾದ “ಅನುಭವ ಮಂಟಪವನ್ನು”ಉಡುಗೊರೆಯಾಗಿ ನೀಡಿದರು.

# ಧ್ವನಿ ಇಲ್ಲದವರ ಪರ ಬದ್ಧತೆ ವ್ಯಕ್ತಿತ್ವ



ಸ್ನೇಹ ಹಾಗೂ ನಂಬಿಕೆಗೆ ಇನ್ನೊಂದು ಹೆಸರು ಎಂದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎನ್ನಬಹುದು.1983 ರಿಂದ ನಾನು ಸಿದ್ದರಾಮಯ್ಯ ಅವರನ್ನು ಬಲ್ಲೆ. ಬಡವರು, ಧ್ವನಿ ಇಲ್ಲದವರ ಪರವಾಗಿ ಇರುವ ಬದ್ಧತೆಯ ವ್ಯಕ್ತಿತ್ವ ಅವರದ್ದು. ನಾನು ವಿಧಾನಪರಿಷತ್ತು ಸದಸ್ಯನಾಗಿ ಕಳೆದ 45 ವರ್ಷಗಳಿಂದ ರಾಮಕೃಷ್ಣ ಹೆಗಡೆ, ಎಸ್.ಎಂ.ಕೃಷ್ಣ ಎಚ್.ಡಿ.ದೇವೇಗೌಡ ಸೇರಿ ದಂತೆ 18. ಜನ ಮುಖ್ಯಮಂತ್ರಿಗಳನ್ನು ನೋಡಿದ್ದೇನೆ ಅವರೆಲ್ಲರೂ ನನಗಿಂತ ಹಿರಿಯರು. ಸಿದ್ದರಾಮಯ್ಯ ಹಾಗೂ ನಾನು ಒಂದೇ ವಯೋಮಿತಿ ಯವರಾಗಿದ್ದೇವೆ. ಸಿದ್ದರಾಮಯ್ಯ ರಾಜಕೀಯವಾಗಿ ಎಷ್ಟೇ ದೊಡ್ಡ ಸ್ಥಾನಕ್ಕೆ ಹೋದರೂ ನಮ್ಮಿಬ್ಬರ ನಡುವಿನ ಸ್ನೇಹದಲ್ಲಿಸಣ್ಣ ವ್ಯತ್ಯಾಸ ಬಂದಿಲ್ಲ. ಇಂದಿಗೂ ಅದೇ ಸ್ನೇಹ ಇದೆ. ಅವರೆಂದೂ ನಂಬಿಕೆದ್ರೋಹ ಮಾಡಿದವರಲ್ಲ. ಬಡವರ ಬಗೆಗಿನ ಅವರ ಕಾಳಜಿ , ಬದ್ಧತೆ, ಸಿದ್ಧಾಂತ ಹಾಗೂ ಸ್ನೇಹ ಅವರಲ್ಲಿ ನನಗೆ ಮೆಚ್ಚುಗೆಯಾದ ಗುಣಗಳಾಗಿವೆ.

● **ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸಭಾಪತಿ**